ಕುಳಿತಿರುತ್ತಿದ್ದರು. ಅವಳ ಸ್ವಭಾವ ಹಿಡಿಸಿತ್ತು. ಏನೋ ಅನ್ನಿಸಿ 'ಅಲ್ಲ, ಮುಂದೆ ಮದುವೆ ಅಲ್ಲೆ ಇರುವವನ ಜೊತೆ ಆಗದಿದ್ರೆ?' ಕೇಳಿದರು. ಸೀಮಂತಿನಿ ಅವರ ಮುಖದತ್ತ ಒಮ್ಮೆ ನೋಡಿ ಬೆರಳುಗಳನ್ನು ಹೆಣೆದುಕೊಂಡು ಯೋಚನಾಮಗ್ನಳಾದಳು. ನಂತರ ನಸುನಕ್ಕು 'ಅದು ಆಮೇಲೆ. ಹುಡುಗ ನಿಕ್ಕಿಯಾಗುವಾಗ ಅವನೊಂದಿಗೆ ಅದೆಲ್ಲ ಚರ್ಚಿಸಬೇಕು' ಭರವಸೆಯಿತ್ತು ಅವಳಲ್ಲಿ.

ಸೀಮಂತಿನಿಯಿದ್ದುದಕ್ಕೆ ಎರಡು ದಿನದಿಂದ ಕಮಲಮ್ಮ ಚಂದನಿಕಾ ರಾತ್ರಿ ಟೀವಿ ನೋಡಲು ಬಂದಿರಲಿಲ್ಲ. ಅವತ್ತು ರಾತ್ರಿ ಬಕುಲಾ ಅವರನ್ನು ಕರೆದರು. ಅವರನ್ನು ಸೀಮಂತಿನಿಗೆ ಪರಿಚಯ ಮಾಡಿಸಿದರು. ಸೀಮಂತಿನಿ ತೆಳುವಾದ ನೈಟಿಯನ್ನು ಹಾಕಿದ್ದಳು. ಚಂದನಿಕಾ ಸಡಿಲವಾದ ಅಂಗಿ ಮತ್ತು ಪಾಯಿಜಾಮದಲ್ಲಿದ್ದಳು. ಅವಳ ಆಕರ್ಷಕ ಅಂಗಸೌಷ್ಠವವನ್ನು ಗಮನಿಸಿದಳು ಸೀಮಂತಿನಿ. ಆದರೆ ತನ್ನ ಹಾಲು ಬಿಳುಪು ಬಣ್ಣ ಮತ್ತು ಎತ್ತರದಿಂದಾಗಿ ಆಕರ್ಷಣೆಯಲ್ಲಿ ತಾನು ಈ ನಟಿಗಿಂತ ಕಮ್ಮಿಯಿಲ್ಲ ಅನಿಸಿತು. ಇವಳು ನಟಿಸುತ್ತಿರುವ ಧಾರಾವಾಹಿ ಟೀಆರ್‌ಪಿಯಲ್ಲಿ ಮೊದಲ ಸ್ಥಾನದಲ್ಲಿದೆ ಅಂತ ಕೇಳಿದವಳು, ಅವಳ ಹತ್ತಿರ ಚಿತ್ರ ಜಗತ್ತಿನ ಬಗ್ಗೆ ಮಾತಿಗಿಳಿದಳು. ಸೀಮಂತಿನಿ ಸಂಶೋಧನೆಯಂತಹ ಉನ್ನತ ಮಟ್ಟದ ವಿದ್ಯಾಭ್ಯಾಸ ಮಾಡುತ್ತಿರುವುದನ್ನು ಅರಿತು ಚಂದನಿಕಾಳಿಗೆ ಗೌರವವುಂಟಾಯಿತು. ಆನಂದ ಹಾಲಿಗೆ ಬಂದವ, ಕಮಲಮ್ಮ ಚಂದನಿಕಾರನ್ನು ಮುಗುಳ್ನಗೆಯಲ್ಲಿ ಮಾತಾಡಿಸಿ ಮೆತ್ತಿಗೆ ಹೋದ. ಸ್ವಲ್ಪ ಬಿಟ್ಟು ಸೀಮಂತಿನಿ ಎದ್ದು ಮೆತ್ತಿಗೆ ಹೋದಳು. ಆನಂದ ಏನೋ ಲೆಕ್ಕ ಬರೆಯುತ್ತಿದ್ದ. ಬರೆದು ಮುಗಿಸಿ ಅದನ್ನು ಮುಚ್ಚಿಟ್ಟು 'ನೀನು ಟೀವಿಯನ್ನು ಅಷ್ಟಾಗಿ ನೋಡೋದಿಲ್ಲ ಅನಿಸ್ತದೆ' ಅಂದ. 'ಅದನ್ನೆಲ್ಲಾ ನೋಡತಾ ಕೂತರೆ ಥೀಸಿಸ್ ತಯಾರಿಯಾದ ಹಾಗೇ!...' ಅಂದವಳು 'ಜಾಲಗಾರರಿಗೆ ನಾಣ್ಯ ನದಿಯಲ್ಲಿ ಸಿಕ್ಕಿದ್ದು ಅಂದೆಯಲ್ಲವ? ನದಿಯನ್ನು ನಾನೂ ನೋಡಬೇಕಲ್ಲ' ಆಸೆ ವ್ಯಕ್ತಪಡಿಸಿದಳು.

ಒಂದು ಕ್ಷಣ ಯೋಚಿಸಿದವ 'ಪ್ರವಾಸಿಗಳು ಸ್ನಾನ ಮಾಡೋದು ದೇಗುಲದೆದುರು ನದಿಯಲ್ಲಿ. ಅದಕ್ಕೂ ಮೊದಲು ಅದೇ ನದಿ ನಮ್ಮ ಗದ್ದೆಗೆ ಹೋಗುವಲ್ಲಿ ಸಿಗತದೆ. ಎಲ್ಲಿ ಹೋಗೋಣ?' ಕೇಳಿದ. ಅವಳಿಗೆ ನಿರ್ಧರಿಸಲಾಗಲಿಲ್ಲ. ಮರುದಿನ ಅವಳನ್ನು ರಥಬೀದಿಗೆ ಕರೆದೊಯ್ದ. ತಾನೂ ಹೋಗದೆ ಸುಮಾರು ದಿವಸಗಳಾಯ್ತೆಂದ ಬಕುಲಾ ಸಂಗಡ ಹೊರಟರು. ಮನೆಯಿಂದ ಸುಮಾರು ಒಂದು ಕಿಲೋಮೀಟರಾಗುತ್ತಿತ್ತು. ನದಿ ಪಾತ್ರಕ್ಕೆ ಹೋಗಲು ಸುಮಾರು ಮೆಟ್ಟಿಲುಗಳನ್ನಿಳಿಯಬೇಕು. ದಂಡೆಯ ಸಮೀಪದಲ್ಲಿ ಜನವಸತಿಯಿಲ್ಲ. ಆದರೆ ನದಿಯಲ್ಲಿ ಸ್ನಾನ ಮಾಡುವವರು, ಬಟ್ಟೆ ತೊಳೆಯುವವರು ಅಂತ ಗದ್ದಲವಿತ್ತು. ಸ್ವಲ್ಪ ಹೊತ್ತು ತಿರುಗಾಡಿ ಮೇಲೇರಿ ದೇವಸ್ಥಾನಕ್ಕೆ ಬಂದರು. ದಪ್ಪನೆಯ ದೊಡ್ಡ ಶಿಲಾಚಪ್ಪಡಿಗಳನ್ನು ಬಳಸಿ ಕಟ್ಟಿದ ದೇಗುಲ. ಮೆಟ್ಟಿಲು ಮೆಟ್ಟಿಲುಗಳಾಗಿ ಪಿರಮಿಡ್ಡಿನಂತೆ ಮೇಲೇರುವ ಗೋಪುರದ ಮೇಲೆ ಕಲಶ. ಕದಂಬರ ಶೈಲಿಯೆಂದೇ ಗುರುತಿಸಲ್ಪಡುವ ಗೋಪುರ.

ಮರುದಿನ ಗದ್ದೆಗೆ ಹೋಗುವ ಜಾಗದಲ್ಲಿ ಹೋಗುವ ಆಸೆಯಾಯಿತು. ಹೊರಟರು. ಬಿಸಿಲಲ್ಲಿ ಅಂತಹ ಕಾವಿರಲಿಲ್ಲ. ಚಂದನಿಕಾಳ ಜೊತೆ ಬಂದ ನೆನಪಾಯಿತು ಆನಂದನಿಗೆ. ಈಗ ಕರಡವಿರಲಿಲ್ಲ. ಕಡಿದುಳಿದ ಬುಡಗಳೂ ಒಣಗಿ ಪುಡಿಯಾಗಿತ್ತು. ಸುತ್ತೆಲ್ಲ ಅಲ್ಲಲ್ಲಿ ಚಿಕ್ಕಪುಟ್ಟ ಗಿಡಗಳು. ನೆಲದ ಮೇಲೆ ಕಾಳು ಅರಸುತ್ತ ಓಡಾಡುತ್ತಿದ್ದ ಹುಂಡು ಮೈಯ ಕೆಲ ಹಕ್ಕಿಗಳು ಮನುಷ್ಯನ ಪ್ರವೇಶದಿಂದ ಪುರ್ರನೆ ಹಾರಿದವು. ತಗ್ಗಿನಲ್ಲಿ ಹರಿಯುವ ನದಿಪಾತ್ರದಲ್ಲಿ ನೀರು ತಂಪಾಗಿತ್ತು. ಗದ್ದೆಯ ಕೆಲಸ ಮುಗಿದಿದ್ದಕ್ಕೆ ಆ ಕಡೆ ಜನ ಸಂಚಾರವಿಲ್ಲದೆ ಅಲ್ಲೆಲ್ಲ ನಿಶ್ಶಬ್ದವಾಗಿತ್ತು. ನೀರಲ್ಲಿದ್ದ ಬಂಡೆಗಳ ಮೇಲೆ ಕುಳಿತರು. ಖುಷಿಯಾಗಿತ್ತು ಅವಳಿಗೆ. ನೀರಲ್ಲಿ ಕಾಲು ಬಡಿದು ನೊರೆಯೇಳಿಸುತ್ತ ಆನಂದಿಸುತ್ತಿದ್ದವಳಿಗೆ ಉಮೇದು ಏರುತ್ತಿತ್ತು. ಎದ್ದು ದಂಡೆಗೆ ಹೋದವಳು ಬಗಲಿಗೆ ನೇತುಹಾಕುವ ಅರಿವೆಯ ಚೀಲದಿಂದ ಟವೆಲ್ಲು ತೆಗೆದಳು. ಈಗ ಅರಿವಾಯಿತು ಅವನಿಗೆ ಅವಳ ಚೀಲದಲ್ಲೇನಿತ್ತೆಂದು. ಸಂದೇಹದಿಂದ ನೋಡುತ್ತಿದ್ದವನಿಗೆ ಹೇಳಿದಳು: 'ಹ್ಯಾಗು ಇಲ್ಲಿ ಯಾರು ಇಲ್ಲ. ನದೀಸ್ನಾನದ ಅನುಭವವಾಗಿ ಎಷ್ಟು ದಿನಗಳಾಗಿದ್ದವು ಗೊತ್ತಾ?' ಆತಂಕದಿಂದ ಹೇಳಿದ: 'ಚಳಿಗಾಲ, ನೀರು ತಣ್ಣಗಿರತದೆ. ಶೀತವಾದೀತು...' ಅವಳು ಮುಗುಳ್ನಗುತ್ತ ನುಡಿದಳು.

'ನೀರಲ್ಲಿಳಿದಮೇಲೆ ಬೆಚ್ಚಗಿರತದೆ.' ಅವಳು ಮನೆಯಿಂದ ಸಡಿಲವಾದ ಅಂಗಿ, ಪಾಯಿಜಾಮದಲ್ಲಿ ಬಂದಿದ್ದಳು. ಅಂಗಿ ಪಾಯಿಜಾಮ ಬಿಚ್ಚಿ ಬಂಡೆಯ ಮೇಲಿರಿಸಿದಳು. ಸ್ಲಿಪ್ ಮತ್ತು ಮೊಳಕಾಲ ಮೇಲೆ ಬರುವ ಚಡ್ಡಿಯಲ್ಲಿ ನೀರಿಗಿಳಿದಳು. ನಾಕು ಮಾರು ಆಚೆ ನೀರು ಆಳವಾಗಿರುವ ಜಾಗ ತೋರಿಸಿದ. ಅಲ್ಲಿ ನೀರಿಗಿಳಿದು ಈಜತೊಡಗಿದವಳು ಇವನನ್ನೂ ಕರೆದಳು. ತಾನು ಬೇರೆ ಬಟ್ಟೆ ತಂದಿಲ್ಲ ಅಂತ ಆತಂಕ ವ್ಯಕ್ತಪಡಿಸಿದ್ದಕ್ಕೆ ಈಜುತ್ತ ಹತ್ತಿರ ಬಂದು, ಚೀಲದಲ್ಲಿ ಇನ್ನೊಂದು ಟವಲಿದೆ ಸುತ್ತಿಕೊ ಅಂತ ಅಧಿಕಾರವಾಣಿಯಲ್ಲಿ ಹೇಳಿದಳು. ತೆಳ್ಳನೆ ಸ್ಲಿಪ್ ಒದ್ದೆಯಾಗಿ ಅವಳ ಮೈಗಂಟಿಕೊಂಡಿತ್ತು. ಅವನ ನೋಟವನ್ನು ಕಂಡು ಮಂದಸ್ಮಿತದಲ್ಲಿ 'ಆಯ್ತಪ್ಪಾ!... ನಾನು ಕುತ್ತಿಗೆವರೆಗೆ ಮುಳುಗಿಯೆ ಈಸತೇನೆ. ನೀನೀಗ ಸುಮ್ಮನೆ ಬಾ' ಮತ್ತೆ ನೀರಿಗೆ ಬಿದ್ದಳು. ಆನಂದ ಟವೆಲನ್ನು ಬಿಗಿಯಾಗಿ ಸುತ್ತಿಕೊಂಡು ಬರಿಮೈಯಲ್ಲಿ ನೀರಿಗೆ ಬಿದ್ದ. ಆಮೇಲೆ ಮೀನಿನಂತಾದ. ಬೇರೆ ಬೇರೆ ಭಂಗಿಗಳಲ್ಲಿ ಈಸುತ್ತ, ಮುಳುಗುತ್ತ, ಮುಳುಗಿ ನೀರಲ್ಲೆ ಅಷ್ಟು ದೂರ ಹೋಗಿ ಮೇಲೇಳುತ್ತ ಅವಳನ್ನು ಅಚ್ಚರಿಪಡಿಸಿದ. ಅವಳ ಸೊಂಟ ಹಿಡಿದು ಅವಳಿಗೆ ಅಂಗಾತ್ತಾಗಿ ಈಸುವುದನ್ನು ಕಲಿಸಿದ. ಒಬ್ಬರಿಗೊಬ್ಬರು ನೀರುಸೋಕಿ ಒಬ್ಬರನ್ನೊಬ್ಬರು ಸೋಲಿಸಿ, ತಮಾಷೆ ಮಾಡಿ ಸುಸ್ತಾದಾಗ ಸೂರ್ಯ ನಡುನೆತ್ತಿಯಲ್ಲಿದ್ದ. ಹಸಿವಿನ ಅನುಭವವಾಗಿ ಮೇಲೆದ್ದರು. ಅವಳು ಬಂಡೆಯ ಮರೆಯಲ್ಲಿ ಬಟ್ಟೆ ಬದಲಿಸಿದಳು. ಮನೆಗೆ ಮರಳಿದಾಗ ಇವರು ಊಟಕ್ಕೆ ಬರುವುದನ್ನೇ ಎಲ್ಲ ಕಾಯುತ್ತಿದ್ದರು.

ಸೀಮಂತಿನಿ ಬಂದ ಮೇಲೆ ಚಂದನಿಕಾಳೊಂದಿಗೆ ಮಾತನಾಡಲೆ ಆಗಿರಲಿಲ್ಲ. ಅವತ್ತು ರಾತ್ರಿ ಎಲ್ಲರ ಸಂಗಡ ಅವನೂ ಕುಳಿತು ಮಾತನಾಡಿದ. ಅವಳ ಅಭಿನಯಕ್ಕೆ ಜನ ಮೆಚ್ಚುಗೆ ಸಿಕ್ಕಿತ್ತು. ನಾಯ್ಡು ಸಿನಿಮಾದ ಕೆಲಸದಲ್ಲಿ ವ್ಯಸ್ತನಾಗಿದ್ದ. ವಾರಗಟ್ಟಲೆ ಈ ಕಡೆ ಬರಲಾಗುತ್ತಿರಲಿಲ್ಲ. ಅವನ ಅಸಿಸ್ಟೆಂಟು ಅವನ ಸೂಚನೆ ಪಡೆದು ಕೆಲಸ ನಿರ್ವಹಿಸುತ್ತಿದ್ದ. ಚಂದನಿಕಾಳಿಗೆ ಬಿಡುವು ಕಮ್ಮಿಯಾಗಿತ್ತು.

ಒಂದು ದಿನ ಪುರಾತತ್ವ ಇಲಾಖೆಯ ಆಫೀಸಿಗೆ ಭೆಟ್ಟಿ ಕೊಟ್ಟರು. ಅಲ್ಲಿ ಕೆಲವು ಮಾಹಿತಿ ಸಿಕ್ಕಿತು. ಶಿರಸಿಯಲ್ಲಿ ನಿವೃತ್ತ ಪ್ರೊಫೆಸರೊಬ್ಬರ ಮನೆಗೆ ಕರೆದೊಯ್ದ ಆನಂದ. ಅವರ ಹತ್ತಿರವಿದ್ದ ಕೆಲ ಗ್ರಂಥಗಳನ್ನು ತೋರಿಸಿ, ಗ್ರಂಥಕಾರರ ಹೆಸರನ್ನು ಹಾಳೆಯಲ್ಲಿ ಬರೆದುಕೊಟ್ಟರು. ತಮ್ಮಲ್ಲಿದ್ದ ಮಾಹಿತಿಗಳನ್ನು ಅವಳಿಗೆ ನೀಡಿದರು. ಅವಳು ಔರಂಗಾಬಾದಿಗೆ ವಾಪಸಾಗುವ ಸಮಯ ಹತ್ತಿರವಾಗಿತ್ತು. ಅವತ್ತು ಊಟವಾದ ಮೇಲೆ ಕೆರೆಯ ಹತ್ತಿರ ಹೋಗೋಣ ಅಂತ ಆನಂದನನ್ನು ಕೇಳಿದಳು. ಐದು ಗಂಟೆಯ ಸಮಯ. ಸೂರ್ಯ ದಿಗಂತದ ಕಡೆ ವಾಲಿದ್ದ. ರಾಣಿಯರಮನೆಯ ಅವಶೇಷದ ಗುಡ್ಡಕ್ಕೆ ಕೆರೆಯಿಂದೇಳುವ ಚಳಿಗಾಲದ ಗಾಳಿ ಸವರುತ್ತಿತ್ತು. 'ಆನಂದ, ಮುಂದೇನು ಮಾಡಬೇಕೂಂತ ನಿನ್ನ ಆಲೋಚನೆ?' ಕೇಳಿದಳು. ಇದ್ದಕ್ಕಿದ್ದಂತೆ ಬಂದ ಪ್ರಶ್ನೆ ಅವನಿಗೆ ಅರ್ಥವಾಗಲಿಲ್ಲ. 'ಮುಂದೇನು ಅಂದರೆ? ತೋಟ, ಗದ್ದೆ ಮನೆ ಕೆಲಸ ಮಾಡತಿದೇನಲ್ಲ. ಅದನ್ನೆ ಮುಂದುವರೆಸುವುದು...' ಅಂದ ಅವಳ ಮುಖ ನೋಡುತ್ತ.

'ಅದಲ್ಲ ಆನಂದ್... ನೀನು ಎಂ.ಎಸ್ಸಿ ಓದಿದೀಯ. ಅದರಲ್ಲೂ ಗೋಲ್ಡ್ ಮೆಡಲ್ ಪಡೆದವ! ಒಳ್ಳೇ ಸಂಬಳದ ಕೆಲಸ ನಿನಗೆ ಸಿಗೋದು ಸುಲಭ. ನಿನ್ನ ಬುದ್ಧಿಮತ್ತೆಯನ್ನು ಎಕ್ಸ್‌ಪೋಸ್ ಮಾಡೋ ಸವಾಲು ಸನ್ನಿವೇಶಗಳು ಇಲ್ಲಿ ಸಿಗಲ್ಲ. ಮಲ್ಟಿನ್ಯಾಶನಲ್ ಕಂಪನಿಗಳಲ್ಲಿ ನಿನ್ನಂತವನನ್ನು ಎಲ್ಲಿಂದ ಎಲ್ಲಿಗೋ ಏರಿಸಿ ಕೂಡಿಸ್ತಾರೆ! ಸಮಾಜದಲ್ಲಿ ಪ್ರತಿಷ್ಠೆ, ಕೈತುಂಬ ಸಂಪಾದನೆ. ನನ್ನ ಪಪ್ಪಾಗೆ ದೊಡ್ಡದೊಡ್ಡವರ ಕನೆಕ್ಷನಿದೆ. ಅವರು ಸಹಾಯ ಮಾಡತಾರೆ ಬೇಕಾದ್ರೆ.'

ಆನಂದನಿಗೆ ಅಚ್ಚರಿಯಾಯ್ತು. 'ನನ್ನ ಸಂಗಡ ಕಲಿತೋರು ಹೊರದೇಶಗಳವರೆಗು ಕೆಲಸದಲ್ಲಿದಾರೆ. ನಾನೇ ಬಯಸಿ ಇಲ್ಲಿ ಬಂದೆ. ಇದು ನಂಗೆ ಖುಷಿ ಕೊಡತಿದೆ. ಅಲ್ಲದೆ ಇಲ್ಲಿ ಅಜ್ಜ ಅಜ್ಜಿಯರಿದಾರೆ' ಅಂದ.

ಅವಳು ಇಲ್ಲಿಗೆ ಹೊರಟಾಗ ಅವಳ ತಂದೆ ತಾಯಿಗೆ ಸಂತಸವಾಗಿತ್ತು. ಆನಂದನ ಬಗ್ಗೆ ಒಳ್ಳೇ ಮಾತು ಹೇಳಿ ಅವಳನ್ನು ಬೀಳ್ಕೊಟ್ಟಿದ್ದರು. ಇಲ್ಲಿ ಬಂದ ಮೇಲೆ ಅವನ ವ್ಯಕ್ತಿತ್ವ, ಕಾರ್ಯಕ್ಷಮತೆ ಅವಳಿಗೆ ಮೆಚ್ಚುಗೆಯಾಗಿತ್ತು. ಈ ಕಾಲದ ಯುವಮನಸಿನ ಲಕ್ಷಣಗಳಾದ ಬೇಗ ಬೇಗ ಹಣ, ಅಂತಸ್ತು, ವಿದೇಶ ಪ್ರಯಾಣ, ಆಸ್ತಿ ಗಳಿಕೆಯ ಮಹತ್ವಾಕಾಂಕ್ಷೆ ಅವನಿಗಿಲ್ಲದ್ದು ಅಚ್ಚರಿ ಮೂಡಿಸಿತ್ತು. ಅವನಿಗಿಲ್ಲೆ ಇರುವ ಮನಸಿದ್ದಂತಿದೆ.